ಈ ದಿನ ದಿನಾಂಕಃ 15-10-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು 3 ರಿಂದ 5 ನೇ ಪ್ರತಿವಾದಿ ಪರ ಶ್ರೀ ವೈ ಎಂ ಕೆ ವಕೀಲರಿಂದಃ**

ನನ್ನ ತಂದೆಯನ್ನು ಚೂರಿ ಚಿಕ್ಕಪ್ಪ ಎಂದು ಸಹ ಕರೆಯುತ್ತಿದ್ದರು ಎಂದರೆ ಸರಿ. ನನ್ನ ತಂದೆಗೆ 4 ಜನ ಹೆಣ್ಣು ಮಕ್ಕಳು. ನನ್ನನ್ನು ಮತ್ತು ನನ್ನ ಸಹೋದರಿಯರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಸಿಲ್ಲ ಎಂದರೆ ಸರಿ. ನಾವು 2021 ನೇ ಸಾಲಿನಲ್ಲಿ ನನ್ನ ತಂದೆ ಮೃತಪಟ್ಟ ಕಾರಣ ದಾವಾಸ್ತಿಯ ಖಾತೆಯನ್ನು ಬದಲಾಯಿಸಲು 5ನೇ ಪ್ರತಿವಾದಿಗೆ ಅರ್ಜಿಯನ್ನು ಸಲ್ಲಿಸಿರುತ್ತೇವೆ. 6 ಮತ್ತು 7ನೇ ಪ್ರತಿವಾದಿಗಳಿಗೆ ದಾವಾಸ್ತಿ ಹೇಗೆ ಬಂತು ಎಂಬ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ದಾವಾಸ್ತಿಯಲ್ಲಿ ನಾವು ಸ್ವಾಧೀನದಲ್ಲಿ ಇಲ್ಲದ ಕಾರಣ 6ನೇ ಪ್ರತಿವಾದಿ 5ನೇ ಪ್ರತಿವಾದಿಗೆ ಅರ್ಜಿಯನ್ನು ಕೊಟ್ಟು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಮೃತಪಟ್ಟ ತರುವಾಯ 7ನೇ ಪ್ರತಿವಾದಿ ಹೆಸರಿಗೆ ಪೌತಿಯಾಧಾರದ ಮೇಲೆ ದಾವಾಸ್ತಿಯ ಖಾತೆ ಬದಲಾವಣೆಯಾಗಿದೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನಾವು ಸ್ವಾಧೀನದಲ್ಲಿ ಇಲ್ಲದ ಕಾರಣ 6 ಮತ್ತು 7ನೇ ಪ್ರತಿವಾದಿಗಳು ವಾಸವಿರುವ ಕಾರಣ ಸದರಿಯವರ ಹೆಸರಿಗೆ ಖಾತೆ ಬದಲಾಣೆಯಾಗಿದೆ ಎಂದರೆ ಸರಿಯಲ್ಲ. ಹಾಗಾಗಿ ಸದರಿ ಖಾತೆ ಬದಲಾವಣೆ ಕಾನೂನು ಬದ್ದವಾಗಿದೆ ಎಂದರೆ ಸರಿಯಲ್ಲ.

ನಾನಾಗಲಿ ಅಥವಾ ನನ್ನ ತಾಯಿಯಾಗಲಿ ಆಲೂರು ಗ್ರಾಮದಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟ ತರುವಾಯ ದಾವಾಸ್ತಿಯ ಖಾತೆ ಬದಲಾವಣೆಗಾಗಿ ನಾವು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸಾಕ್ಷಿ ನನ್ನ ತಾಯಿಗೆ ಅನಾರೋಗ್ಯವಿದ್ದ ಕಾರಣ 2021ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾಸ್ತಿಯಲ್ಲಿ 6 ಮತ್ತು 7ನೇ ಪ್ರತಿವಾದಿಗಳೇ ಸ್ವಾಧೀನಾನುಭವದಲ್ಲಿ ಮುಂದುವರೆಯುತ್ತಿದ್ದು ಅವರ ಸ್ವಾಧೀನಾನುಭವಕ್ಕೆ ತೊಂದರೆಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ.

(ವಮಾನ್ಯ ಎ ಜಿ ಪಿ ಮತ್ತು 6 ಮತ್ತು 7 ನೇ ಪ್ರತಿವಾದಿ ಪರ ವಕೀಲರಾದ ಯಾವುದೇ ಲಿಖಿತ ತಕರಾರನ್ನು ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು).

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.